## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ

**ಸಿ.ಸಿ ನಂ.2198/2023**

1) ಕರ್ನಾಟಕ ಸರ್ಕಾರ ಪರವಾಗಿ ಕಾಮಸಮುದ್ರಂ ಪೋ.ಠಾಣೆ. ...ಪಿರ್ಯಾದಿ.

**- ವಿರುದ್ಧ -**

1) ವೆಂಕಟೇಶಪ್ಪ ಬಿನ್ ಯಲ್ಲಪ್ಪ, ...ಆರೋಪಿತರು.
67 ವರ್ಷ, ವ್ಯವಸಾಯ,
2) ಮುನಿಯಮ್ಮ ಕೋಂ ವೆಂಕಟೇಶಪ್ಪ,
50 ವರ್ಷ, ಗೃಹಿಣಿ,
3) ಲಕ್ಷ್ಮೀ ಕೋಂ ನಾರಾಯಣಸ್ವಾಮಿ,
30 ವರ್ಷ, ಗೃಹಿಣಿ,

ಎಲ್ಲರೂ ವಾಸಃ ಬಿ ಹೊಸ ಮನೆಗಳು ಗ್ರಾಮ, ಕೇತಗಾನಹಳ್ಳಿ ಅಂಚೆ,
ಬಂಗಾರಪೇಟೆ ತಾಲ್ಲೂಕು.

= = = = =

ದಿಃ 20.10.2023.

**ನಾನುಃ ಶ್ರೀ. ಅಜಿತ್ ದೇವರಮನಿ.**
B.Sc., L.L.B.
ಅಪರ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಂಗಾರಪೇಟೆ.

## ಃ ಃ ದೋಷಾರೋಪಣೆ ಃ ಃ

**ಆರೋಪಿತರಾದ ನೀವು -**

1) ವೆಂಕಟೇಶಪ್ಪ, 2) ಮುನಿಯಮ್ಮ ಮತ್ತು 3) ಲಕ್ಷ್ಮೀ ಆದ ನಿಮ್ಮಗಳ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ-

ದಿನಾಂಕಃ22.12.2022 ರಂದು ರಾತ್ರಿ ಸುಮಾರು 7.00 ಗಂಟೆಯಲ್ಲಿ 1 ನೇ ಆರೋಪಿಯಾದ ನೀನು ಚಾಸಾ-1 ಮಹಾಲಕ್ಷ್ಮೀರವರ ಗಂಡ ಚಾಸಾ-2 ದೇವರಾಜ ರವರ ಬಳಿ ಮಾತನಾಡಬೇಕೆಂದು ಚಾಸಾ-2 ರವರನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ ಆರೋಪಿತರಾದ ನೀವುಗಳು ಚಾಸಾ-2 ರವರನ್ನು ನಿನ್ನ ಬಳಿ ಇರುವ ಹಣವನ್ನು ನಮಗೆ ಕೊಟ್ಟು ಬಿಡು ಇಲ್ಲವಾದಲ್ಲಿ ಇಲ್ಲಿಯೇ ನಿನ್ನನ್ನು ಸಾಯಿಸುತ್ತೇವೆಂದು ಕೊಲೆ ಬೆದರಿಕೆ ಹಾಕಿದ್ದು, ಚಾಸಾ-1 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿಕೊಂಡು ಚಾಸಾ-1 ರವರ ಬೆನ್ನಿನ ಮೇಲೆ, ತಲೆಯ ಮೇಲೆ ಹೊಡೆದು, ಚಾಸಾ-1 ರವರು ಆರೋಪಿಗಳಾದ ನಿಮ್ಮಗಳನ್ನು ಕುರಿತು ನಿಮ್ಮ ಮೇಲೆ ಪೊಲೀಸರಿಗೆ ದೂರು ಕೊಡುತ್ತೇನೆಂದು ಹೇಳಿದಾಗ, 1 ನೇ ಆರೋಪಿಯಾದ ನೀನು ನಮ್ಮ ಮೇಲೆ ದೂರು ಕೊಡಲು ಹೋದಲ್ಲಿ ನಿನ್ನನ್ನು ಮತ್ತು ನಿನ್ನ ಗಂಡನನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿದ್ದು, ಈ

ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀನು ಚಾಸಾ-1 ಮಹಾಲಕ್ಷ್ಮೀರವರ ಗಂಡ ಚಾಸಾ-2 ದೇವರಾಜ ರವರ ಬಳಿ ಮಾತನಾಡಬೇಕೆಂದು ಚಾಸಾ-2 ರವರನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ ಆರೋಪಿತರಾದ ನೀವುಗಳು ಚಾಸಾ-2 ರವರನ್ನು ನಿನ್ನ ಬಳಿ ಇರುವ ಹಣವನ್ನು ನಮಗೆ ಕೊಟ್ಟು ಬಿಡು ಇಲ್ಲವಾದಲ್ಲಿ ಇಲ್ಲಿಯೇ ನಿನ್ನನ್ನು ಸಾಯಿಸುತ್ತೇವೆಂದು ಕೊಲೆ ಬೆದರಿಕೆ ಹಾಕಿ, ಕೈಗಳಿಂದ ಹೊಡೆದು, ಚಾಸಾ-2 ರವರ ಬಳಿಯಿದ್ದ ರೂ.10,000/- ಗಳನ್ನು ಕಿತ್ತುಕೊಂಡು ಕಳುಹಿಸಿದ್ದು, ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ. 327 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿ, ಕೈಗಳಿಂದ ಹೊಡೆದು, ಚಾಸಾ-2 ರವರ ಬಳಿಯಿದ್ದ ರೂ.10,000/- ಗಳನ್ನು ಕಿತ್ತುಕೊಂಡು ಕಳುಹಿಸಿದ್ದು, ಈ ವಿಚಾರ ತಿಳಿದುಕೊಂಡ ಚಾಸಾ-1 ರವರು ಚಾಸಾ-2 ರವರೊಂದಿಗೆ ಹಣವನ್ನು ಕೇಳಲು ಆರೋಪಿತರಾದ ನಿಮ್ಮಗಳ ಮನೆಯ ಬಳಿಗೆ ಬಂದಾಗ, 1 ನೇ ಆರೋಪಿಯಾದ ನೀನು ಹಣ ಕೊಡುವುದಾಗಿ ತಿಳಿಸಿ, ಮನೆಯೊಳಗೆ ಕರೆದುಕೊಂಡು ಬಾಗಿಲು ಚಿಲಕವನ್ನು ಹಾಕಿ, ಚಾಸಾ-1 ರವರ ಬಲಗೈಯನ್ನು ಹಿಡಿದು ತಿರುವಿ, ಚಾಸಾ-1 ರವರು ಧರಿಸಿದ್ದ ನೈಟಿಯನ್ನು ಕಿತ್ತು ಹಾಕಿ, ಒಳ ಉಡುಪುಗಳನ್ನು ತೆಗೆಯಲು ಪ್ರಯತ್ನಿಸಿ, ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದು, ಚಾಸಾ-1 ಮತ್ತು 2 ರವರು ಬಾಗಿಲನ್ನು ಹೊಡೆದು ಹೊರ ಬಂದು ತಮ್ಮ ಗ್ರಾಮದ ದೊಡ್ಡಮ್ಮ ದೇವಸ್ಥಾನದ ಬಳಿ ಬರುತ್ತಿದ್ದಾಗ, 1 ನೇ ಆರೋಪಿಯಾದ ನೀನು ಚಾಸಾ-1 ರವರನ್ನು ಕುರಿತು "ನೀನು ತುಂಬಾ ಒಳ್ಳೆಯ ಹುಡುಗಿ, ನೀನು ತುಂಬಾ ಚೆನ್ನಾಗಿ ಇದ್ದೀಯಾ" ಎಂದು ಹೇಳುತ್ತಾ ಚಾಸಾ-1 ರವರ ಬೆನ್ನನ್ನು ತಟ್ಟಿ, ಚಾಸಾ-1 ರವರ ಕೈಯನ್ನು ಹಿಡಿದುಕೊಂಡು ಮನೆಯ ಒಳಗೆ ಬರುವಂತೆ ಎಳೆದಾಡಿದ್ದು, ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ. 354 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ-1 ರವರು 1 ನೇ ಆರೋಪಿಯಾದ ನಿನ್ನಿಂದ ತಪ್ಪಿಸಿಕೊಳ್ಳಲು

ಯತ್ನಿಸಿದಾಗ, ಆರೋಪಿಗಳಾದ ನೀವುಗಳು ಚಾಸಾ–1 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿದ್ದು ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ. 341 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ–2 ರವರಿಗೆ ಕೈಗಳಿಂದ ಹೊಡೆದಿದ್ದು, ಚಾಸಾ–1 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿಕೊಂಡು ಚಾಸಾ–1 ರವರ ಬೆನ್ನಿನ ಮೇಲೆ, ತಲೆಯ ಮೇಲೆ ಹೊಡೆದಿದ್ದು, ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ. 323 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಓ ಹೇ ಕೇ ಸರಿ ಇದೆ.

**ಅಪ**ರ ಜೆ.ಎಂ.ಎಫ್.ಸಿ. ನ್ಯಾಯಾಧೀಶರು
ಬಂಗಾರಪೇಟೆ.